# ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಭಾರತ ಸಂವಿಧಾನದ ಅನುಚ್ಛೇದದ 16ರನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಮತ್ತು ಬಡ್ತಿಯಲ್ಲಿ ಮೀಸಲಾತಿ – ಒಂದೇ ಹುದ್ದೆಯಿರುವ ವೃಂದಗಳಲ್ಲಿ –ಬಗ್ಗೆ

ಓದಲಾಗಿದೆ : (1) ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77, ದಿನಾಂಕ : 27ನೇ ಏಪ್ರಿಲ್ 1998 ಮತ್ತು ತದನಂತರ ಆದೇಶ; ಅಧಿಕೃತ ಜ್ಞಾಪನ ಇತ್ಯಾದಿ

(2) ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 8 ಸೆಹಿಮ 95, ದಿನಾಂಕ : 20ನೇ ಜೂನ್ 1995.

ಪ್ರಸ್ತಾವನೆ:–

ಮೇಲೆ (1) ರಲ್ಲಿ ಓದಲಾದ ಆದೇಶಗಳಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ಬಡ್ತಿಯಲ್ಲಿ ಮತ್ತು ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4) ರನ್ವಯ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಒದಗಿಸಿಕೊಡಲಾಗಿದೆ. ಸರ್ವೋಚ್ಚ ನ್ಯಾಯಾಲಯ ಚಕ್ರಧರ ಪಾಸ್ವಾನ್–ವಿರುದ್ದ–ಬಿಹಾರ ರಾಜ್ಯ (ಎಐಆರ್ 1988 ಎಸ್.ಸಿ.959) ಡಾ. ಸಂಜೀವ ಶರ್ಮ–ವಿರುದ್ದ–ಹಿಮಾಚಲ ಪ್ರದೇಶ (1991 (1) ಎಸ್‌ಎಲ್‌ಆರ್ 4131 (ಎಸ್‌ಸಿ) ಮತ್ತು ರಾಜ್ಯ ಉಚ್ಚ ನ್ಯಾಯಾಲಯದ ಪೂರ್ಣ ಪೀಠ ಡಾ॥ ರಾಜಕುಮಾರ ಮತ್ತಿತರ ವಿರುದ್ದ ಗುಲ್ಬರ್ಗಾ ವಿಶ್ವವಿದ್ಯಾಲಯ (ಎಆರ್ 1990 ಕೆ.ಎಲ್.ಆರ್.320) ಪ್ರಕರಣಗಳಲ್ಲಿ, ಒಂದು ವೃಂದದಲ್ಲಿ ಒಂದೇ ಹುದ್ದೆಯಿದ್ದಲ್ಲಿ ಅದಕ್ಕೆ ಯಾವುದೇ ಮೀಸಲಾತಿಯನ್ನು ಅನ್ವಯಿಸುವಂತಿಲ್ಲ ಮತ್ತು ಈ ರೀತಿ ಒಂದೇ ಹುದ್ದೆಗಳಿರುವ ವೃಂದಗಳನ್ನು ಒಟ್ಟುಗೂಡಿಸಿ ಮೀಸಲಾತಿಯನ್ನು ಅನ್ವಯಿಸುವುದು ನ್ಯಾಯ ಸಮ್ಮತವಲ್ಲವೆಂದು ತೀರ್ಪುಗಳನ್ನು ನೀಡಿವೆ. ಸರ್ವೋಚ್ಚ ನ್ಯಾಯಾಲಯ ಚಕ್ರಧರ್ ಪಾಸ್ವಾನ್ ಪ್ರಕರಣದಲ್ಲಿ ನೀಡಿದ ತೀರ್ಪನ್ನು ಮತ್ತೆ **Bhide Girls Education Society v/s Education Officer Zilla Parishad, Nagpur and others 1994 (26) Administration Tribunal Cases 89)** ಪ್ರಕರಣದಲ್ಲಿ ನಿರ್ಣಾಯಕವಾಗಿ ಪುನರುಚ್ಚರಿಸಿದೆ. ಈ ತೀರ್ಪುಗಳ ಹಿನ್ನಲೆಯಲ್ಲಿ ಸರ್ಕಾರ ವೃಂದದಲ್ಲಿ ಒಂದೇ ಹುದ್ದೆಯಿರುವ ಪ್ರಕರಣಗಳಲ್ಲಿ ಮೀಸಲಾತಿಯನ್ನು ಅನ್ವಯಿಸುವ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 21 ಸೇಹಿಮೆ 90, ಬೆಂಗಳೂರು ದಿನಾಂಕ 16ನೇ ನವೆಂಬರ್ 1995**

ಪ್ರಸ್ತಾವನೆಯಲ್ಲಿ ಹೇಳಲಾದ ಹಿನ್ನಲೆಯಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ಒಂದೇ ಹುದ್ದೆಯಿರುವ ವೃಂದಗಳಲ್ಲಿ ನೇರ ನೇಮಕಾತಿಗಾಗಲೀ ಅಥವಾ ಮುಂಬಡ್ತಿಗಾಗಲೀ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ಭಾರತ ಸಂವಿಧಾನದ ಅನುಚ್ಛೇದ 16ರಡಿಯಲ್ಲಿ ಹೊರಡಿಸಿದ ಮೀಸಲಾತಿ ಆದೇಶಗಳು ಅನ್ವಯಿಸತಕ್ಕದ್ದಲ್ಲ ಎಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎ.ಕೆ.ಎಂ. ನಾಯಕ್
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.